ಇಮೋಜಿ ಭಾಷೆ



ಕರ್ಕಿ ಕೃಷ್ಣಮೂರ್ತಿ

# ಬರೆದು ಜೀವಿಸಬಹುದೆ?

ಬರೆದಾಗ ಜನ ಅದನ್ನು ನಂಬುತ್ತಾರೆ ಎನ್ನುವುದಕ್ಕೇ ಅಲ್ಲವೆ ಎಲ್ಲರೂ ಬರೆಯುವುದು? ಸುಳ್ಳಾಗಲೀ ಅಸಂಗತವಾಗಲೀ, ಇವತ್ತಲ್ಲದಿದ್ದರೂ ಮುಂದೆಂದೋ ಓದಿದವರು ಅದನ್ನು ನಿಜವೆಂದೇ ತಿಳಿಯಬಹುದಲ್ಲ?

ಮೌನ, ಮಾತು, ಬರಹಗಳ ಕುರಿತು ನಾನು ಹಾಗೂ ನನ್ನ ಮಿತ್ರ ಚರ್ಚಿಸುತ್ತಿದ್ದೆವು. 'ಮೌನದ ಘನ ರೂಪ ಮಾತು, ಮಾತಿನ ಘನ ರೂಪ ಬರಹ' ಅಂದ ನನ್ನ ಮಿತ್ರ.

'ಅದು ವೈಸ್–ವರ್ಸಾ. ಮಾತು ಬರಹಗಳ ಘನ ರೂಪ ಮೌನ' ಎಂದೆ ನಾನು.

ಹೀಗೊಂದಿಷ್ಟು ಮಾತುಗಳು ಮಥಿಸಿ, 'ಕೊನೆಯಲ್ಲಿ ನಾನು ಹೇಳಿದ್ದನ್ನೇ ಒಪ್ಪಿಕೊಳ್ತೀ ನೀನು, ಬೇಕಾದ್ರೆ ಬರೆದುಕೊಡ್ತೇನೆ' ಎನ್ನುತ್ತ ಚರ್ಚೆಯನ್ನು ವಾದಕ್ಕೆಳೆಸಿದ ಆತ. 'ಬರೆದುಕೊಡದಿದ್ರೆ ಆಗೋದಿಲ್ವೇನು?' ಅವನನ್ನು ಕೆಣಕಲೆಂದೇ ಕೇಳಿದೆ. 'ಆಗಿದ್ದನ್ನೇ ಬರೆಯುವುದು, ಬರೆಯುವುದೇ ಆಗುವುದು. ಮಖ್ತೂಬ್...' ಎಂದ ಆತ.

'ಮಖ್ತೂಬ್' ಶಬ್ದ ಕೇಳುತ್ತಲೇ ನನಗೆ ಪಾವ್ಲೋ ಕೊಯಿಲೋನ 'ದ ಅಲ್ಕೆಮಿಸ್ಟ್' ಕಾದಂಬರಿ ನೆನಪಾಯಿತು. ಅರೇಬಿಕ್ ಭಾಷೆಯಲ್ಲಿ, 'ಬರೆಯಲಾಗಿದೆ' ಎನ್ನುವ ಅರ್ಥದ ಈ ಶಬ್ದದ ಮೂಲ ಕುರಾನ್. 'ವಿಧಿಯೆಂಬುದು ಈಗಾಗಲೇ ಬರೆಯಲಾಗಿದೆ, ಹಾಗೂ ಅದನ್ನು ಯಾರಿಂದಲೂ ಬದಲಾಯಿಸಲು ಸಾಧ್ಯವಿಲ್ಲ' ಎನ್ನುವ ಸಂದೇಶವನ್ನು ಅರುಹಲು ಕುರಾನಿನಲ್ಲಿ ಮಖ್ತೂಬ್ ಪದದ ಬಳಕೆಯಾಗಿದೆ. 'ಅಲ್ಕೆಮಿಸ್ಟ್'ನಲ್ಲಿಯೂ ಈ ಶಬ್ದಕ್ಕೆ ಸಾಕಷ್ಟು ಪ್ರಾಮುಖ್ಯತೆಯಿದೆ. ನಿಧಿಯ ಅನ್ವೇಷಣೆಯಲ್ಲಿ ಊರೂರು ಅಲೆಯುವ ಕಾದಂಬರಿಯ ನಾಯಕ, ಈ ಶಬ್ದದ ಹಿನ್ನೆಲೆಯಲ್ಲಿ ತನ್ನ ಹಲವು ಗೊಂದಲಗಳಿಗೆ ಉತ್ತರವನ್ನು ಕಂಡುಕೊಳ್ಳುವುದು 'ಅಲ್ಕೆಮಿಸ್ಟ್' ಕಾದಂಬರಿಯ ಸಾರ.

ಇನ್ನು ಬೈಬಲ್ಲಿಗೆ ಬಂದರೆ, 'As it is written' ಎನ್ನುವ ಸೂಕ್ತಿಗೆ ಕ್ರಿಸ್ತನನ್ನೂ ಸೇರಿ ಹಲವು ಪ್ರವಾದಿಗಳು ಒತ್ತು ನೀಡಿದ್ದಾರೆ. ನಮ್ಮಲ್ಲಿಯೂ ವಿಧಿ ಲಿಖಿತ, ಬ್ರಹ್ಮಲಿಪಿ, ಹಣೆಬರಹ ಇತ್ಯಾದಿ ಮಾತುಗಳು ಚಾಲ್ತಿಯಲ್ಲಿವೆ. ಚಿತ್ರಗುಪ್ತ ಪ್ರತಿಯೊಂದು ಜೀವಿಯ ಆಗುಹೋಗುಗಳನ್ನೂ ಬರೆದಿಡುತ್ತಾನೆ ಎಂಬ ನಂಬಿಕೆಯಿದೆ. ಹಾಗಾದರೆ, ಈ ಬರೆಯುವಿಕೆಗೆ ಯಾಕಷ್ಟು ಮಹತ್ವ? ಬರೆದಿಟ್ಟಮೇಲೆ ಅದು ಅಧಿಕೃತ; ಬರೆದದ್ದು ಇಂದೋ, ಹಿಂದೋ, ಮುಂದೋ, ಎಲ್ಲೋ, ಹೇಗೋ ನಿಜವಾದೀತು ಎನ್ನುವ ಸುಪ್ತ ಭಾವನೆ ನಮ್ಮಲ್ಲಿದೆಯೇ? ಈ ಬರೆಯುವಿಕೆಯ ಮೇಲಿನ ನಂಬಿಕೆ ಕೇವಲ ವಿಧಿ ಬರಹಕ್ಕೆ ಮಾತ್ರ ಸಂಬಂಧಿಸಿದ್ದೇ ಅಥವಾ ಎಲ್ಲ ಪ್ರಕಾರದ ಬರವಣಿಗೆಗೂ ಇದು ಅನ್ವಯವೇ?